# ಟ್ರಾಲಿ

■ ನಾ. ಡಿಸೋಜ

ಬಾಟಮ್ ಎಂಬ ಶಬ್ದಕ್ಕೆ ಕೆಳಗೆ, ಪಾತಾಳದಲ್ಲಿ. ಆಳವಾದ ಜಾಗದಲ್ಲಿ ಎಂದೆಲ್ಲ ಅರ್ಥಗಳಿವೆ. ಇದು ಬಿಟ್ಟರೆ ಈ ಶಬ್ದಕ್ಕೆ ಹೆಚ್ಚಿನ ಮಹತ್ವ ಇಲ್ಲ. ಆದರೆ ಆ ಊರಿನಲ್ಲಿ ಮಾತ್ರ ಬಾಟಮ್ ಅಂತ ಹೇಳಿದ ಕೂಡಲೆ ಜನ ರೋಮಾಂಚನಗೊಳ್ಳುತ್ತಾರೆ. ಅವರ ದೇಹದ ಮೇಲಿನ ರೋಮಗಳು ನಿಗುರಿ ನಿಲ್ಲುತ್ತವೆ. ಕಾಲು ಕಂಪಿಸುತ್ತವೆ. ಮೈ ಸಣ್ಣಗೆ ಬೆವರೊಡೆಯುತ್ತದೆ. ಜನರೇಟರಿನ ಸದ್ದು ಕಿವಿಯ ಮೇಲೆ ಬಿದ್ದು ಮನಸ್ಸು ಗಾಬರಿಗೊಳ್ಳುತ್ತದೆ. ಇಲ್ಲಿ ಬಾಟಮ್ ಎಂದರೆ ತನ್ನ ಒಡಲಲ್ಲಿ ಎಂಟು ವಿದ್ಯುತ್ ಉತ್ಪಾದನಾ ಯಂತ್ರಗಳನ್ನ ಇರಿಸಿಕೊಂಡು ವಿದ್ಯುತ್ತನ್ನು ಉತ್ಪಾದಿಸಿ ಇಡೀ ನಾಡಿಗೆ ವಿದ್ಯುತ್ ನೀಡುವ ಒಂದು ಸ್ಥಳ. ಇಲ್ಲಿ ಕೆಲಸ ಮಾಡುವ ಸಾವಿರಾರು ಜನರಿಗೆ 'ಬಾಟಮ್' ಅಂದಕೂಡಲೇ ಕಣಿವೆಯಲ್ಲಿ ಅಡಗಿರುವ ವಿದ್ಯುತ್ ಉತ್ಪಾದನಾ ಕೇಂದ್ರ, ಬೆಟ್ಟದ ಬೆನ್ನ ಮೇಲೆ ಹಾಸಿರುವ ಪೈಪುಗಳು, ಹತ್ತಿ ಇಳಿಯುವ ಎರಡು ಟ್ರಾಲಿಗಳು, ಕೆಲಸ ಮಾಡುವ ಜನ, ಸದಾ ಸದ್ದು ಮಾಡುವ ಜನರೇಟರುಗಳು ನೆನಪಿಗೆ ಬರುತ್ತವೆ. ಮನಸ್ಸಿಗೆ ಭೀತಿಯೂ ಕವಿಯುತ್ತದೆ, ಆಹ್ಲಾದವೂ ಆಗುತ್ತದೆ.

ಕೆಳಗೆ ಕಣಿವೆಯಲ್ಲಿ ಹರಿಯುವ ಶರಾವತಿ, ಇದರ ರಕ್ಷಣೆಗೆ ನಿಂತಿರುವ ಬೆಟ್ಟಗಳು, ಬಂಡೆಗಳು, ಮನಸ್ಸಿನ ನೆಮ್ಮದಿಯನ್ನ ಹೆಚ್ಚಿಸುತ್ತವೆ. ಮುಖ್ಯವಾಗಿ ಎಲ್ಲವೂ ಮೌನವನ್ನಪ್ಪಿ ನಿಂತಿರುವಾಗ ಟ್ರಾಲಿ ಹೌಸಿನಲ್ಲಿ ಇರುವ ಯಂತ್ರ ದೊಡ್ಡ ಸದ್ದಿನೊಂದಿಗೆ ತಿರುಗುತ್ತಿರುತ್ತದೆ. ಸಪೂರವಾದ ತಂತಿಗಳನ್ನ ಸುತ್ತಿ ಹೆಣೆದು ಮಾಡಿದ ದಪ್ಪ ಹಗ್ಗ ಒಂದು ಕಡೆ ಬಿಚ್ಚಿಕೊಳ್ಳುತ್ತ ಮತ್ತೊಂದು ಕಡೆ ಸುತ್ತಿಕೊಳ್ಳುತ್ತ ಇದರ ತುದಿಗೆ ಕಟ್ಟಿದ ಎರಡೂ ಟ್ರಾಲಿಗಳು ಮೇಲೆ ಕೆಳಗೆ ಹತ್ತಿ ಇಳಿದು ಮಾಡುತ್ತಿರುತ್ತವೆ. ಕಲ್ಲು ಕೆಲಸ ಮಾಡುವವರು, ಇಂಜಿನಿಯರುಗಳು, ಮೆಕ್ಯಾನಿಕ್, ವೆಲ್ಡರ್, ಗಾರೆ ಕೆಲಸದವರು, ಇನ್ನೂ ಹಲವರು ಈ ಟ್ರಾಲಿಗಳ ಮೇಲೆ ಕುಳಿತು ಬೇಕಾದ ಕಡೆ ಇಳಿಯುತ್ತ, ಬೇಕಾದ ಕಡೆ ಹತ್ತುತ್ತ ಕೆಲಸದಲ್ಲಿ ತೊಡಗಿದ್ದರೆ, ಇಡೀ ಕಣಿವೆ ಈ ಕೆಲಸಗಳನ್ನ ನೋಡುತ್ತ ಸಂಭ್ರಮಿಸುವಂತೆ ಕಾಣುತ್ತಿತ್ತು. ಟ್ರಾಲಿ ಹೌಸಿನ ಟ್ರಾಲಿ ಆಪರೇಟರ್ ಟ್ರಾಲಿಯನ್ನು ಯಾರು ನಿಲ್ಲಿಸುವಂತೆ, ಇಲ್ಲ ಬಿಡುವಂತೆ ಸಿಗ್ನಲ್ ನೀಡುತ್ತಿದ್ದಾರೆ ಎಂಬುದನ್ನ ಸೂಕ್ಷ್ಮವಾಗಿ ಗಮನಿಸುತ್ತ ಕುಳಿತಿರುತ್ತಾನೆ. ಈ ಟ್ರಾಲಿಯನ್ನ ನಡೆಸುವ ಡ್ರೈವರ್ ಎಲ್ಲರ ಪಾಲಿಗೆ ಓರ್ವ ಅದ್ಭುತ ವ್ಯಕ್ತಿಯ ಸ್ಥಾನವನ್ನ ಆಕ್ರಮಿಸಿಕೊಂಡಿರುತ್ತಾನೆ.

ಜೋಗದಲ್ಲಿ ಹರಿಯುವ ನೀರಿನಿಂದ ವಿದ್ಯುತ್ ಉತ್ಪಾದಿಸುವ ಕೆಲಸ ಆರಂಭವಾಗಿ ಕೆಲ ತಿಂಗಳು ಉರುಳಿತ್ತು. ವರ್ಷದಲ್ಲಿ ಐದು ತಿಂಗಳು ಅನ್ನುವ ಹಾಗೆ ಮಳೆ ಬೀಳುತ್ತಿದ್ದುದರಿಂದ ಕೆಲಸ ನಿಧಾನಗತಿಯಲ್ಲಿ ನಡೆದಿತ್ತು. ಇಲ್ಲಿ ಮಳೆಗಾಲ ಪ್ರಾರಂಭವಾಯಿತು ಅನ್ನುವಾಗ ಕೆಲಸ ನಿಲ್ಲಿಸಿ ತಮಿಳುನಾಡು, ಕೇರಳ, ಆಂಧ್ರ ಪ್ರದೇಶದಿಂದ ಬಂದ ಕೂಲಿಕಾರರು ತಮ್ಮ ರಾಜ್ಯಗಳಿಗೆ ಹಿಂತಿರುಗುತ್ತಿದ್ದರು. ಒಂದು ಅರ್ಥದಲ್ಲಿ ಜೋಗ ಇನ್ನು ಐದು ತಿಂಗಳು ಬರಿದು. ಈ ಐದು ತಿಂಗಳು ಜೋಗದಲ್ಲಿ ಒಂದು ಬಗೆಯ ಶಾಂತಿ ನೆಲೆಸಿರುತ್ತದೆ. ಆದರೆ ಜೋಗದ ಸಂಪೂರ್ಣ ಜವಾಬ್ದಾರಿಯನ್ನು

